ಇನಾಂ ಇಲಾಖಾ.

ನಂ. 3. ತಾರೀಖು 18ನೇ ಡಿಸೆಂಬರ್ ಸ್ ೯ 1894ನೇ ಇಸವಿ.

ಇನಾಂದಾರರಿಗೆ ಇದರಿಂದ ತಿಳಿಯಪಡಿಸುವದೇನಂದರೆ,—ನೆಲವಂಗಲ ತಾಲ್ಲೂಕಿನಲ್ಲಿ ಇರತಕ್ಕ ಜಿಲ್ಲರೆ ಇನಾಂಗಳ ಬಾಬತು (1,752) ಫೈನಲ್ ಟೈಟಲ್ ಡೀಡ್‌ಯಾನೆ ಕಾಯಂಪಟ್ಟೆಗಳು ಬೆಂಗಳೂರ ಡಿಸ್ಟ್ರಿಕ್ಟು ಡೆಪ್ಯೂಟಿ ಕಮ್ಮಿಷನರವರಬಳಿಗೆ ಬಟವಾಡೆ ಬಗ್ಯೆ ಈ ತಾರೀಖಿನಲ್ಲಿ ಕಳುಹಿಸಲ್ಪಟ್ಟವು.

2. ಸದರೀ ತಾಲ್ಲೂಕಿನ ಆಮಲ್‌ದಾರರಿಂದ ಪ್ರತ್ಯೇಕ ಪ್ರತ್ಯೇಕ ನೋಟಿಸ್ ಬಂದಮೇಲೆ ಅವುಗಳನ್ನ ತೆಗದುಕೊಳ್ಳುವ ಬಗ್ಯೆ ಸದರೀ ಇನಾಂದಾರು ಐರ್ಜ ಪ್ರಕಾರ ಹಾಜರಾಗತಕ್ಕದ್ದು. ಸದರೀ ತಾಲ್ಲೂಕಿನ ಅಮಲ್‌ದಾರು ಅಂಥಾ ನೋಟಿಸಗಳನ್ನ ದೇರ್‌ಮಾಡದೆ ಕೊಡತಕ್ಕದ್ದೆಂದು ಇದರಿಂದ ನಿಯಮಿಸಲ್ಪಟ್ಟು ಇರುತ್ತಾರೆ.

3. ಸದರೀ ಜಿಲ್ಲರೆ ಇನಾಂಗಳ ಬಗ್ಯೆ ಈ ಆಫಿಸಿನಿಂದ ಮೊದಲೆ ಕೊಡಲ್ಪಟ್ಟ ಹಂಗಾಮಿ ಪಟ್ಟೆಗಳು ರದ್ದು ಮಾಡಲ್ಪಟ್ಟು ಇರುತ್ತೆಂದು ಇದರ ದೆಕೆಯಿಂದ ಪ್ರಕಟಿಸಲ್ಪಟ್ಟು ಇರುತ್ತೆ.

ಜೆ. ಪಿ. ಗ್ರಾಂಟ್,
ಸೂಪರ್‌ಟೆಂಡೆಂಟ್ ಆಫ್ ಇನಾಂ ಸೆಟ್ಲ್‌ಮೆಂಟ್.

ನಂದೀದುರ್ಗ ಡಿವಿಜ್ಞ ಡಿಸ್ಟ್ರಿಕ್ಟ್ ಜಡ್ಜಿಯವರ ಕೋರ್ಟಿನಲ್ಲಿ.

ಸ್ ೯ 1894—95ನೇ ಇಸವಿ ಮಿಸಲೇನಿಯಸ್ ಅರ್ಜೀ ನಂಬರ್ 238.

ಮೃತಪಟ್ಟ ಮುಳ ಚೆನ್ನೇಗವುಡರ ಆಸ್ತೀ ವಿಷಯದಲ್ಲಿ—

ಅರ್ಜೀದಾರು ಚೆನ್ನಪಟ್ಣ ತಾಲ್ಲೂಕು ವಿರೂಪಾಕ್ಷಿಪುರದ ಹೋಬಳಿ ಬಂಡುರವಳಗರಹಳ್ಳಿಯಲ್ಲಿರುವ ಮುದ್ದಮಲ್ಲೇಗವುಡನು, ಮೃತಪಟ್ಟ ಸದರೀ ಮುಳ ಚೆನ್ನೇಗವುಡರಿಗೆ ಮಗನು ಆಗಬೇಕೆಂಬ ಹಕ್ಕುದಾರಿ ಮೇಲೆ ಬಂಡುರವಳಗರಹಳ್ಳಿ ಸ್ಥಳದ ಮುದ್ದಮಲ್ಲೇಗವುಡರು, ಡಿಟೋ ವಾಸಸ್ಥರಾಗಿ ಮೃತಪಟ್ಟ ಮುಳ ಚೆನ್ನೇಗವುಡರ ಜೆಂದಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ ಮಾಡುವದಕ್ಕೆ ಸ್ ೯ 1860ನೇ ಇಸವಿ 27ನೇ ಆಕ್ಟ್ ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಮುದ್ದಮಲ್ಲೇಗವುಡರ ಅರ್ಜಿಯನ್ನು ಸ್ ೯ 1895ನೇ ಇಸವಿ ಫಿಬ್ರುವರಿ ತಿಂಗಳ ತಾರೀಖು 13 ರಲ್ಲು ಕೇಳಿ ಸರಟಿಫಿಕೇಟ್ ಪಡೆಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಮುಳ ಚೆನ್ನೇಗವುಡರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸ್ ೯ 1895ನೇ ಇಸವಿ ಜನವರಿ ತಿಂಗಳ 12ನೇ ತಾರೀಖಿನಲ್ಲಿ ಕೋರ್ಟು ಮೊಹರ್ ನಿಶಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ಟಿ. ನರಹರಿರಾವ್,
ಡಿಸ್ಟ್ರಿಕ್ಟು ಜಡ್ಜ್.

ಬೆಂಗಳೂರು ಡಿಸ್ಟ್ರಿಕ್ಟು.

ತಾರೀಖು 18ನೇ ಡಿಸೆಂಬರ್ 1894ನೇ ಇಸವಿ.

ಇದರಿಂದ ಸಮಸ್ತರಿಗೂ ತಿಳಿಯಪಡಿಸುವದೇನಂದರೆ,—1894—95ನೇ ವಿಜಯ ಸಂವತ್ಸರದ ಬಾಬತು ನೆಲವಂಗಲದ ತಾಲ್ಲೂಕಿನಲ್ಲಿರುವ ಕುರಂಗದ ಕಲ್ಲನ್ನು ಜಮಾಯಿಸತಕ್ಕ ಹಕ್ಕು ಸದರೀ ತಾಲ್ಲೂಕು ಕಛೇರಿಯಲ್ಲಿ 1895ನೇ ಇಸವಿ ಜನವರಿ ಮಾಹೆ 17ನೇ ತಾರೀಖು ದಿವಿ 11 ಘಂಟೆಯಲ್ಲಿ ಬಹಿರಂಗವಾದ ಹರಾಜು ಮೂಲಕ ವಿಕ್ರಯಿಸಲ್ಪಡುವದು.

2. ಸದರೀ ಹರಾಜು 1894ನೇ ಇಸವಿ ಜುಲ್ಯೆ 12ನೇ ಮುದ್ರಿಸಿದ ಮೈಸೂರ್ ಗೆಜೆಟ್ 2ನೇ ಭಾಗದ 548ನೇ ಪೇಜಿನಲ್ಲಿ ಪ್ರಕಟವಾಗಿರುವ 3—7—94ನೇ ಮುದ್ರಿಸಿದ ಇಸ್ತಿಹಾರಿನಲ್ಲಿ ಕಂಡ ಷರತ್ತಿಗೆ ಒಳಪಟ್ಟಿರುತ್ತೆ.

ಯಂ. ಅಂಣಾಜಿರಾವ್,
ಫಾರ್ ಡೆಪ್ಯೂಟಿ ಕಮ್ಮಿಷನರ್.

ಫಾರೆಸ್ಟ್ ಇಲಾಖಾ.

ಇಸ್ತಿಹಾರ್‌ನಾಮಾ.

ತಾರೀಖು 1ನೇ ಜನವರಿ 1895.

ಸ್ ೯ 1890ನೆ ಫಿಬ್ರುವರಿ 1ನೇ ತಾರೀಖಿನ ಮೈಸೂರು ಗೆಜೆಟ್ 2ನೆ ಪಾರ್ಟ್ 26ನೇ ಪುಟದಲ್ಲಿ ಫಾಯಿಷ್ ಆಗಿರುವ ಇನ್‌ಸ್ಪೆಕ್ಟರ್ ಜನರಲ್ ಸಾಹೆಬರವರ 221—90ನೆ ಮುದ್ರಿಸಿದ ನೋಟಿಫಿಕೇಷ್ ಅನುಸರಿಸಿ ಯಲ್ಲರಿಗೂ ತಿಳಿಸುವದೇನಂದರೆ, ಈ ಕೆಳಗೆ ಕಂಡ ಬೆಂಗಳೂರು ಡಿಸ್ಟ್ರಿಕ್ಟಿನ ಫಾರೆಸ್ಟ್ಟುಗಳು ಮತ್ತು ಪ್ಲಾಂಟೇಷ್ಟಗಳನ್ನು ಜೇಸಿಗೆ ಕಾಲಕ್ಕೊಸ್ಕರ ಸ್ ೯ 1895ನೆ ಫಿಬ್ರುವರಿ ಗುರ್ತ್ ಲಾಗಾಯತು ಮೇ 31ನೆ ತಾರೀಖು ವರಿಗೂ ಬಂದ್ ಮಾಡಲ್ಪಟ್ಟು ಇವೆ. ಇವುಗಳಲ್ಲಿ ಶಿಕಾರಿ ವಗ್ಯೆರೆ ಬಗ್ಯೆ ಯಾರೂ ಪ್ರವೇಶಿಸಕೂಡದು. ಅತಿಕ್ರಮಪ್ರವೇಶ ಮಾಡಿದವರನ್ನ ಪ್ರಾಸಿಕ್ಯೂಷ್ ನಡಿಸುತ್ತೆ.